ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ.—ಶಾಲೆಯಲ್ಲಿ ಮಕ್ಕಳ ಸಂಖ್ಯೆ ಕಡಿಮೆಯಾದರೆ ಸಂಬಳ ನಿಲ್ಲಿಸಬೇಕೆಂದು ಹೇಳುತ್ತಿದ್ದೀರಿ. ಅದೇ ರೀತಿ ಶಾಲೆಯಲ್ಲಿ ವಿಶೇಷವಾಗಿ ಸಂಖ್ಯೆ ಜಾಸ್ತಿಯಾದರೆ ಉಪಾಧ್ಯಾಯರ ಸಂಬಳ ಹೆಚ್ಚಿಸುತ್ತೀರಾ ?

ಶ್ರೀ ಎ. ಆರ್. ಬದರಿನಾರಾಯಣ.—ಸಂಖ್ಯೆ ಮೇಲೆ ಸಂಬಳ ಏರಿಸುವುದಿಲ್ಲ. ಮೇಷ್ಟ್ರುಗಳ ಸಂಖ್ಯೆಯನ್ನು ಏರಿಸುತ್ತೇವೆ ಅಷ್ಟೆ.

ಶ್ರೀ ಬಿ. ಬೈರಪ್ಪಾಜಿ.—ಅನೇಕ ಪಾಠಶಾಲೆಗಳಲ್ಲಿ ನಿಯಮಿತ ಸಂಖ್ಯೆ 25ಕ್ಕಿಂತ ಕಡಿಮೆ ಇದ್ದು ಮ್ಯಾನೇಜ್‌ಮೆಂಟಿನವರು ಉಪಾಧ್ಯಾಯರುಗಳನ್ನು ನೇಮಕ ಮಾಡಿಯೂ ಸಂಬಳ ಕೊಡದಿರತಕ್ಕ ನಿದರ್ಶನ ಅನೇಕ ಇವೆ. ಆದ್ದರಿಂದ ವರ್ಷದ ಪ್ರಾರಂಭದಲ್ಲಿಯೇ ಆರೀತಿಯಾಗದಿರುವುದಕ್ಕೆ ಸೂಕ್ತವಾದ ಕ್ರಮ ತೆಗೆದುಕೊಂಡು ಆ ವ್ಯವಸ್ಥೆಯನ್ನು ಸರಿಮಾಡಿ ಉಪಾಧ್ಯಾಯರಿಗೆ ಸಂಬಳ ಸರಿಯಾಗಿ ಕೊಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎ. ಆರ್. ಬದರಿನಾರಾಯಣ.—ಹಾಗಿದ್ದರೆ, ಅಂಥ ವ್ಯವಸ್ಥೆಯನ್ನು ಮಾಡೋಣ.

## Absorption of Secretaries as Village Accountant-*cum*-Panchayat Secretaries in Dharwar District

163. **Sri B. G. BANAKAR** (Hirekerur).—

Will the Minister for Community Development and Social Welfare be pleased to state :—

(*a*) the total number of Village Accountants-*cum*-Panchayat Secretaries in Dharwar District ;

(*b*) the total number of Secretaries who have handed over charge to the Village Accountant-*cum*-Panchayat Secretaries ;

(*c*) whether the Government has thought of continuing or absorbing these Secretaries either as Panchayat Clerks or Village Accountants-*cum*-Panchayat Secretaries ;

(*d*) the minimum and maximum period of service these Secretaries have put in ?

**Sri M. MALLIKARJUNASWAMY** (Minister for Community Development and Social Welfare).—

(*a*) 559.

(*b*) Nil.

(Appointment orders to Village Accountants have not been issued since the approval for the list is awaited from the Divisional Commissioner).

(*c*) Under consideration.

(*d*) The minimum and maximum periods are 2½ years and 29 years respectively.

ಶ್ರೀ ಬಿ. ಜಿ. ಬಣಕಾರ್.—ಈ ವಿಲೇಜ್ ಅಕೌಂಟೆಂಟ್ ಕಮ್ ಪಂಚಾಯತ್ ಸೆಕ್ರೆಟರಿ ಮತ್ತು ತರಾಟಗಳನ್ನು ನೇಮಕ ಮಾಡಿ ಎಷ್ಟು ದಿವಸವಾಗಿದೆ ?

†ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಇನ್ನೂ ನೇಮಕ ಮಾಡಿಲ್ಲ; ಅವರ ಆಯ್ಕೆ ಆಗಿದೆ.

ಶ್ರೀ ಬಿ. ಜಿ. ಬಣಕಾರ್.—ಎಷ್ಟು ಕಡೆಗಳಲ್ಲಿ ಈ ವಿಲೇಜ್ ಅಕೌಂಟೆಂಟ್ ಕಮ್ ಸೆಕ್ರಟರಿ ಗಳು ಕೆಲಸ ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಹಿಂದೆ ಇದ್ದ 559 ಪಂಚಾಯತ ಸೆಕ್ರಟರಿಗಳು ಈಗಾಗಲೇ ಅಲ್ಲಿರುವ ಗ್ರಾಮಪಂಚಾಯತುಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಆ ಜಿಲ್ಲೆಯಲ್ಲಿ ಒಟ್ಟು 620 ಪಂಚಾಯತುಗಳು ಇವೆ.

ಶ್ರೀ ಎಫ್. ಎಸ್. ತಾವರೆ.—ಈಗಿರುವಂತಹ ಸೆಕ್ರಟರಿಗಳನ್ನೂ ಸೇರಿಸಿಕೊಂಡು ಒಂದು ಪಟ್ಟಿ ಮಾಡುವ ಒಂದು ನಿಯಮವನ್ನು ಇಟ್ಟುಕೊಂಡಿದ್ದೀರಾ ಹೇಗೆ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅವರನ್ನೂ ಕೂಡಿಸಿಕೊಂಡು ಪಟ್ಟಿ ಮಾಡುತ್ತಾ ಇಲ್ಲ. ಅವರಲ್ಲಿ ಎಸ್.ಎಸ್.ಎಲ್.ಸಿ. ಕ್ವಾಲಿಫಿಕೇಷನ್ ಯಾರಿಗೆ ಇದೆ, ಮತ್ತು 10 ವರ್ಷ ಸರ್ವಿಸ್ ಯಾರಿಗೆ ಆಗಿದೆ ಅಂಥವರನ್ನು ಸೇರಿಸತಕ್ಕಂತಹ ಒಂದು ಎಲಿಜಿಬಿಲಿಟಿ ರೂಲ್ಸ್ ಮಾಡಿದ್ದೇವೆ. ಅದರ ಪ್ರಕಾರ ಅವರನ್ನು ಆಯ್ಕೆ ಮಾಡುತ್ತಿದ್ದೇವೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—559 ಪಂಚಾಯತ್ ಸೆಕ್ರಟರಿಗಳನ್ನು ಬದಲಾಯಿಸಿ, ಪಂಚಾಯಿತಿ ಕ್ಲರ್ಕ್ ಕಮ್ ವಿಲೇಜ್ ಅಕೌಂಟೆಂಟ್ ಅವರನ್ನು ನೇಮಿಸುತ್ತೀರಾ ಅಂದರೆ, ಅಂಡರ್ ಕನ್ಸಿಡರೇಷನ್ ಎಂದು ಹೇಳಿದ್ದೀರಿ. ಆದ್ದರಿಂದ ಹಿಂದೆ ಇದ್ದವರನ್ನೇ ನೇಮಕ ಮಾಡುವುದಕ್ಕೆ ಸರ್ಕಾರದಲ್ಲಿ ಈಗ ಡೈರೆಕ್ಟ್ ರಿಕ್ರುಟ್‌ಮೆಂಟ್ ರೂಲ್ಸ್ ಏನಿದೆ, ಅದರ ಪ್ರಕಾರ ಇಲ್ಲಿಯೂ ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅದನ್ನು ಮಾಡಿದ್ದೇವೆ.

ಶ್ರೀ ಎಫ್. ಎಸ್. ತಾವರೆ.—10-12 ವರ್ಷ ಸರ್ವಿಸ್ ಆಗಿರತಕ್ಕಂತಹ ಪಂಚಾಯತ್ ಸೆಕ್ರಟರಿಗಳನ್ನು ಕೈಬಿಟ್ಟು ಒಂದು ವರ್ಷ ಸರ್ವಿಸ್ ಆಗಿರತಕ್ಕಂತಹ ಕುಲಕರ್ಣಿಗಳನ್ನು ನೇಮಕ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅದು ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಕೆ. ಪ್ರಭಾಕರ್.—ಶ್ಯಾನುಭೋಗರಾಗಲಿ, ಸೆಕ್ರಟರಿಯವರಾಗಲಿ ಅಥವಾ ಸೆಕ್ರಟರಿ ಕಮ್ ಅಕೌಂಟೆಂಟಾಗಲಿ ಗ್ರಾಮ ಪಂಚಾಯಿತಿನಲ್ಲಿ ನರಿಯಾದ ಸಮಯಕ್ಕೆ ಚಾರ್ಜ್ ಹ್ಯಾಂಡ್ ಓವರ್ ಮಾಡದೆ ಸಂಬಂಧಪಟ್ಟ ಗ್ರಾಮಗಳಿಗೆ ಬಹಳ ತೊಂದರೆಯಾಗಿರುವುದರಿಂದ ಇನ್ನು ಮುಂದೆ ಅವರು ಸಂಬಂಧಪಟ್ಟ ಅಧಿಕಾರಿಗಳಿಗೆ ಚಾರ್ಜ್ ಹ್ಯಾಂಡ್ ಓವರ್ ಮಾಡದ ಹೊರತು ಅವರಿಗೆ ಸಂಬಳ ಕೊಡಬಾರದು ಎಂಬುದನ್ನು ಸರ್ಕಾರದವರು ಕೂಲಂಕಷವಾಗಿ ಪರಿಶೀಲಿಸುತ್ತಾರೆಯೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಇದು ನೂಕ್ತವಾದ ಸಲಹೆ; ಅದನ್ನು ಸರ್ಕಾರ ಗಮನಿಸುತ್ತದೆ.

ಶ್ರೀ ಬಿ. ಜಿ. ಬಣಕಾರ್.—ಈಗ ಪಂಚಾಯತ್ ಸೆಕ್ರಟರಿ ಜುರಿಸ್‌ಡಿಕ್ಷನ್ ಮತ್ತು ಶಾನುಭೋಗರ ಜುರಿಸ್‌ಡಿಕ್ಷನ್ ಹೆಚ್ಚು ಕಮ್ಮಿ ಇದೆ. ಅದನ್ನು ನರಿಪಡಿಸುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಮಾನ್ಯ ಸದಸ್ಯರು ಹೇಳತಕ್ಕಂತದ್ದು ಸರಿಯಾಗಿ ಅರ್ಥವಾಗುತ್ತಾ ಇಲ್ಲ. ಈಗ 12 ಸಾವಿರ ರೂಪಾಯಿಗಿಂತ ಜಾಸ್ತಿ ಆದಾಯ ಇರತಕ್ಕ ಪಂಚಾಯಿತಿಗಳಿಗೆ ವಿಲೇಜ್ ಅಕೌಂಟೆಂಟ್ ನೇಮಕ ಮಾಡುತ್ತಿದ್ದೇವೆ; ಮತ್ತು 12 ಸಾವಿರಕ್ಕಿಂತ ಕಮ್ಮಿ ವರಮಾನ ಇರತಕ್ಕಂತಹ ಕಡೆಗಳಲ್ಲಿ ವಿಲೇಜ್ ಅಕೌಂಟೆಂಟ್ ಕಮ್ ಸೆಕ್ರಟರಿ ನೇಮಕ ಮಾಡುತ್ತಿದ್ದೇವೆ.

Sri J. P. SARWESH.—Will the Government assure the house that the village accountants posted will not be posted in their own villages ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಜಿಲ್ಲಾಧಿಕಾರಿಗಳು ಅವರನ್ನು ನೇಮಕ ಮಾಡುವಾಗ ಸಾಧ್ಯವಾದಷ್ಟು ಅವರ ಸ್ವಗ್ರಾಮಗಳಿಗೆ ನೇಮಕ ಮಾಡಬಾರದು ಎಂದು ಏನೂ ಇಲ್ಲ. ಆದರೂ ಕೂಡ ಕೆಲವು ಕಡೆಗಳಲ್ಲಿ ಸ್ವಗ್ರಾಮಗಳಿಗೆ ಹಾಕುವದು ಸೂಕ್ತವೆಂದು ಹೇಳುತ್ತಾರೆ; ಮತ್ತು ಕೆಲವು ಕಡೆಗಳಲ್ಲಿ ಸ್ವಗ್ರಾಮಗಳಿಗೆ ಹಾಕಿದರೆ ಅಲ್ಲಿ ಅವರು ರಾಜಕೀಯ ಮಾಡುತ್ತಾರೆ ಎಂದು ಹೇಳುವ ಮಾತೂ ಇದೆ.

ಶ್ರೀ ಬಿ. ಜಿ. ಬಣಕಾರ್.—ಈ ಒಂದು ಪಂಚಾಯತ್ ಕ್ಷೇತ್ರದಲ್ಲಿ ಮೂರು ನಾಲ್ಕು ಶ್ಯಾನುಭೋಗರು, ತಲಾಟಿಗಳು ಕೆಲಸ ಮಾಡತಕ್ಕಂಥಹ ಸಂದರ್ಭ ಇದೆ. ಆದ್ದರಿಂದ ಪಂಚಾಯತುಗಳಲ್ಲಿ ಒಂದು ಸಮನ್ವಯ ರೀತಿಯ ಆಡಳಿತ ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಒಂದೊಂದು ಪಂಚಾಯತಿಗಳಲ್ಲಿ ಒಂದೇ ತಲಾಟಿ ಇರುವ ಹಾಗೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅದನ್ನು ಪರಿಶೀಲನೆ ಮಾಡೋಣ.

MADAM SPEAKER.—Question No. 18 will be taken on some other day.

## Amrit Mahal Kavals in the State

202. Sri B. BYRAPPAJI (Turuvekere).—

Will the Minister of State for Animal Husbandry be pleased to state :—

(*a*) the names of taluks in the State where there are Amrit Mahal Kavals ;

(*b*) the extent of the Kavals ;

(*c*) whether it is a fact that Government have decided to grant compensation to the native officers in charge of rearing cattle in those Kavals in terms of land and surrender the remaining lands to Revenue Department ;

(*d*) if so, the reason for not implementing the same ?

Sri N. CHIKKE GOWDA (Minister of State for Animal Husbandry).—

(*a*) and (*b*) The names of taluks where there are Amrit Mahal Kavals and their extent is given in the statement appended.

(*c*) No.

(*d*) Does not arise.